497

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**– ಶ್ರೀ ಎನ್.ವಿ. ಚಂದ್ರಶೇಖರ್, ಹಿಂದಿನ ಜಂಟಿ ಕೃಷಿ ನಿರ್ದೇಶಕರು, ರಾಯಚೂರು (ನಿವೃತ್ತ) ಹಾಗೂ ಶ್ರೀ ಶಿವಶೇಖರ ಪಾಟೀಲ್, ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ ರಾಯಚೂರು ಇವರ ವಿರುದ್ದ ಶಿಸ್ತು ಕ್ರಮ ಕುರಿತು.

**ಓದಲಾಗಿದೆ:–**

ಅಡಿಷನಲ್ ರಿಜಿಸ್ಟ್ರಾರ್, ವಿಚಾರಣೆಗಳು–9 ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: ಕಂಪ್ಲೇಂಟ್ /ಲೋಕ್/ಜಿಎಲ್‌ಬಿ/ 41/2011/ಎಆರ್‌ಇ–9, ದಿನಾಂಕ: 21–02–2013.

**ಪ್ರಸ್ತಾವನೆ:–**

ಅಪರ ನಿಂಬಂಧಕರು, ವಿಚಾರಣೆಗಳು–9, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು ಮೇಲೆ ಓದಲಾದ ದಿನಾಂಕ: 21–02–2013ರ ಪತ್ರದಲ್ಲಿ ಶ್ರೀ ಎನ್.ವಿ. ಚಂದ್ರಶೇಖರ್, ಹಿಂದಿನ ಜಂಟಿ ಕೃಷಿ ನಿರ್ದೇಶಕರು, ರಾಯಚೂರು (ಹಾಲಿ ನಿವೃತ್ತ) ಹಾಗೂ ಶ್ರೀ ಶಿವಶೇಖರ ಪಾಟೀಲ್, ಹಿಂದಿನ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು ರವರ ವಿರುದ್ದದ ಆರೋಪಕ್ಕೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರವರು ನೀಡಿರುವ ತನಿಖಾ ವರದಿಯನ್ನು ಲಗತ್ತಿಸಿ, ಸದರಿ ತನಿಖಾ ವರದಿಯಲ್ಲಿ ಕಾಣಿಸಿರುವಂತೆ ಪ್ರಕರಣದಲ್ಲಿ ಶಿಸ್ತುಕ್ರಮ ಆಯೋಜಿಸಲು ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಮಾನ್ಯ ಲೋಕಾಯುಕ್ತರವರು ತಮ್ಮ ತನಿಖಾ ವರದಿಯಲ್ಲಿ ಪ್ರಕರಣದಲ್ಲಿ ಅಧಿಕಾರಿಯವರಾದ ಶ್ರೀ ಎನ್.ವಿ. ಚಂದ್ರಶೇಖರ್, ಜಂಟಿ ಕೃಷಿ ನಿರ್ದೇಶಕರು(ನಿವೃತ್ತ) ಮತ್ತು ಶ್ರೀ ಶಿವಶೇಖರ ಪಾಟೀಲ್, ಕೃಷಿ ಅಧಿಕಾರಿ, ರವರುಗಳ ವಿರುದ್ಧ ಶ್ರೀ ರಾಜಕುಮಾರ್ ತಂದೆ ಗುರುಲಿಂಗಪ್ಪ, ರಾಜ್ ಕಂಪ್ಯೂಟರ್ಸ್ ಮತ್ತು ಜೆರಾಕ್ಸ್‌ನ ಮಾಲಿಕರು, ಕೃಷಿ ಮಹಾ ವಿದ್ಯಾಲಯ ಆವರಣ, ರಾಯಚೂರು ಇವರು ಮೇ 2008ನೇ ತಿಂಗಳಿನಲ್ಲಿ ಕೃಷಿ ಇಲಾಖೆಯ ಆತ್ಮ, ಎ.ಇ.ಎಸ್ ಟೀಮ್, ಎಸ್.ಆರ್.ಎ.ಪಿ. ತರಬೇತಿಯ ಮ್ಯಾನುವೆಲ್‌ನ 60 ಬುಕ್‌ಲೆಟ್‌ಗಳನ್ನು ಪ್ರಿಂಟ್ ಮಾಡಿಸಿ, ಬೈಡಿಂಗ್ ಮಾಡಿ ಕೊಟ್ಟಿದ್ದುದರ ಬಾಬ್ತು ರೂ. 6799/– ಗಳನ್ನು ಪಾವತಿಸುವಂತೆ ಜಂಟಿ ಕೃಷಿ ನಿರ್ದೇಶಕರು, ರಾಯಚೂರು, ಇವರನ್ನು ಕೋರಿದಾಗ, ಸದರಿ ಹಣವನ್ನು ನೀಡಲು ರೂ. 2000ಗಳ ಲಂಚ ನೀಡುವಂತೆ ಒತ್ತಾಯಿಸಿರುತ್ತಾರೆಂದು, ಆದರೆ ಫಿರ್ಯಾಧಿದಾರನಿಗೆ ಲಂಚ ನೀಡಲು ಇಷ್ಟವಿಲ್ಲವಾದ್ದರಿಂದ, ಅವರು ಲೋಕಾಯುಕ್ತ ಕಚೇರಿ, ರಾಯಚೂರು, ಇಲ್ಲಿ ದೂರು ದಾಖಲಿಸಿ, ನಂತರ ಫಿರ್ಯಾದಿದಾರನು, ಆಪಾದಿತ ಅಧಿಕಾರಿಗಳೊಬ್ಬರಾದ

--2--

(13).

ಶ್ರೀ ಶಿವಶೇಖರ್ ಪಾಟೀಲ್, ಹಿಂದಿನ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು, ಇವರಿಗೆ ಲಂಚದ ಹಣ ನೀಡಲು ಹೋದಾಗ ಅವರು ಫಿರ್ಯಾದಿದಾರನನ್ನು ಹೊರಗೆ ಕರೆದುಕೊಂಡು ಹೋಗಿದ್ದು, ಅವರು ಅಲ್ಲಿ ಲಂಚದ ಹಣ ಸ್ವೀಕರಿಸದೇ, ನಿಜಲಿಂಗಪ್ಪ ಕಾಲೋನಿಯಲ್ಲಿಯ ಒಂದು ಅಂಗಡಿಗೆ ಕರೆದುಕೊಂಡು ಬಂದು, ಅಂಗಡಿಯಲ್ಲಿದ್ದ ಅವರ ಸಂಬಂಧಿಯಾದ ಶ್ರೀ ಬಸವರಾಜ್ ಬಿನ್ ಮಲ್ಲಿಕಾರ್ಜುನ ಇವರಿಗೆ ಸದರಿ ಲಂಚದ ಹಣವನ್ನು ನೀಡುವಂತೆ ತಿಳಿಸಿದ್ದರ ಮೇರೆಗೆ ಫಿರ್ಯಾಧಿದಾರರು, ರೂ. 2000/-ಗಳನ್ನು ಆ ಹುಡುಗನಿಗೆ ನೀಡುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಸದರಿ ಲಂಚದ ಹಣವನ್ನು ಸ್ವೀಕರಿಸಿದ ಶ್ರೀ ಬಸವರಾಜುರವರ ಎರಡು ಕೈಗಳನ್ನು ಸೋಡಿಯಂ ಕಾರ್ಬೋನೆಟ್ ಬೆರೆಸಿದ ದ್ರಾವಣದಲ್ಲಿ ಇರಿಸಿದಾಗ ದ್ರಾವಣದ ಬಣ್ಣ ಬದಲಾದ ಕಾರಣ ಆರೋಪಿತ ಅಧಿಕಾರಿಗಳ ಪರವಾಗಿ ಶ್ರೀ ಬಸವರಾಜ ಲಂಚದ ಹಣವನ್ನು ಸ್ವೀಕರಿಸಿರುವುದು ರುಜುವಾತಾಗಿರುವುದು ಕಂಡು ಬಂದಿದ್ದರಿಂದ ಇದಕ್ಕೆ ಕಾರಣರಾದ ಶ್ರೀ ಎನ್.ವಿ. ಚಂದ್ರಶೇಖರ್, ಹಿಂದಿನ ಜಂಟಿ ಕೃಷಿ ನಿರ್ದೇಶಕರು, ರಾಯಚೂರು ಹಾಗೂ ಶ್ರೀ ಶಿವಶೇಖರ ಪಾಟೀಲ್, ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು ಇವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ರ ಪ್ರಕಾರ ತಪ್ಪೆಸಗಿದ್ದಾರೆಂಬುದು ಮೇಲ್ನೋಟಕ್ಕೆ (prima-facie) ಕಂಡು ಬಂದಿದ್ದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಉದ್ದೇಶಿಸಿ, ಆರೋಪಿತ ಅಧಿಕಾರಿಯವರಿಗೆ ಲೋಕಾಯುಕ್ತರಿಂದ ಅವರು ಎಸಗಿರುವ ಆರೋಪಗಳ ಬಗ್ಗೆ ಕಾರಣ ಕೇಳುವ ಪತ್ರ ಜಾರಿ ಮಾಡಿ ಲಿಖಿತ ಹೇಳಿಕೆ ನೀಡುವಂತೆ ಕೋರಿದ್ದು, ಅದಕ್ಕೆ ಅವರು ನೀಡಿದ ಲಿಖಿತ ಹೇಳಿಕೆ ತೃಪ್ತಿಕರವಾಗಿರದಿರುವುದರಿಂದ ಶ್ರೀ ಎನ್. ವಿ. ಚಂದ್ರಶೇಖರ್, ತಂದೆ ವೆಂಕಟರಾಮಯ್ಯ, ಜಂಟಿ ಕೃಷಿ ನಿರ್ದೇಶಕರು(ನಿವೃತ್ತ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2)(b)(i)ರಡಿ ಹಾಗೂ ಶ್ರೀ ಶಿವಶೇಖರ್ ಪಾಟೀಲ್, ತಂದೆ ಶ್ರೀ ವಿರೂಪಾಕ್ಷಪ್ಪ, ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು, (ಹಾಲಿ ಕೃಷಿ ಅಧಿಕಾರಿ, ಬೀಜ ಪರೀಕ್ಷಾ ಪ್ರಯೋಗಾಲಯ ವಡ್ಡರಹಟ್ಟಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರಡಿ ಇಲಾಖಾ ವಿಚಾರಣೆ ಆಯೋಜಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14-ಎ ಪ್ರಕಾರ ತಮಗೆ ವಹಿಸುವಂತೆ ಕೋರಿರುತ್ತಾರೆ.

--3--

495



ಗೌರವಾನ್ವಿತ ಲೋಕಾಯುಕ್ತರವರ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಸದರಿ ಪ್ರಕರಣದಲ್ಲಿ ಸದರಿ ಜಂಟಿ ಕೃಷಿ ನಿರ್ದೇಶಕರು(ನಿವೃತ್ತ)ರವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮ 214(2) (b)(i)ರಡಿ ಮತ್ತು ಸದರಿ ಕೃಷಿ ಅಧಿಕಾರಿ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಾವಳಿ 1957ರ ನಿಯಮ 11ರಡಿ ವಿಚಾರಣಾ ಕ್ರಮವನ್ನು ಆಯೋಜಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14(ಎ)ರಡಿಯಲ್ಲಿ ಮಾನ್ಯ ಲೋಕಾಯುಕ್ತರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 45 ಕೃಪವಿ 2009**
**ಬೆಂಗಳೂರು, ದಿನಾಂಕ: 17ನೇ ಏಪ್ರಿಲ್ 2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಶ್ರೀ ಎನ್. ವಿ. ಚಂದ್ರಶೇಖರ್, ಹಿಂದಿನ ಜಂಟಿ ಕೃಷಿ ನಿರ್ದೇಶಕರು ರಾಯಚೂರು (ನಿವೃತ್ತ) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 214(2) (b)(i)ರಡಿ ಹಾಗೂ ಶ್ರೀ ಶಿವಶೇಖರ್ ಪಾಟೀಲ್ ತಂದೆ ಶ್ರೀ ವಿರೂಪಾಕ್ಷಪ್ಪ, ಹಿಂದಿನ ಕೃಷಿ ಅಧಿಕಾರಿ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ರಾಯಚೂರು (ಹಾಲಿ ಕೃಷಿ ಅಧಿಕಾರಿ, ಬೀಜ ಪರೀಕ್ಷಾ ಪ್ರಯೋಗಾಲಯ ವಡ್ಡರಹಟ್ಟಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ) ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ಪ್ರಕಾರ ಇಲಾಖಾ ವಿಚಾರಣೆ ಕ್ರಮವನ್ನು ಆಯೋಜಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಮಾನ್ಯ ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05) ಕರ್ನಾಟಕ, ಬೆಂಗಳೂರು.
2. ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು.

3. ಅಪರ ನಿಬಂಧಕರು ವಿಚಾರಣೆಗಳು-9 ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
5. ಜಂಟಿ ಕೃಷಿ ನಿರ್ದೇಶಕರು, ರಾಯಚೂರು/ಕೊಪ್ಪಳ.
6. ಸಹಾಯಕ ಕೃಷಿ ನಿರ್ದೇಶಕರು, ರಾಯಚೂರು/ ಸಹಾಯಕ ಕೃಷಿ ನಿರ್ದೇಶಕರು, ಬಿಜ ಪರೀಕ್ಷಾ ಪ್ರಯೋಗಾಲಯ, ವಡ್ಡರಹಟ್ಟಿ, ಗಂಗಾವತಿ ಕೊಪ್ಪಳ ಜಿಲ್ಲೆ.
7. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಸಹಾಯಕರಿಗೆ,
10. ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.